# ಸದಭಿರುಚಿಯ ಮನರಂಜನೆ ನೀಡುವಾಸೆ

**ನಿರ್ದೇಶಕ ಶಶಾಂಕ್ ಸೋಗಲ್ ಸಂದರ್ಶನ**

■ ಸುಮಲತಾ ಎನ್.



ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದ ಶಶಾಂಕ್ ಸೋಗಲ್ ಅವರನ್ನು ಸಿನಿಮಾ ಲೋಕದೆಡೆಗೆ ಕರೆತಂದಿದ್ದು ಅವರ ಬಾಲ್ಯದ ಬಣ್ಣದ ನಂಟು. ಮೈಸೂರಿನಲ್ಲಿ, ಶಾಲಾ ದಿನಗಳಲ್ಲೇ ನಾಟಕದ ಸಾಂಗತ್ಯ ಬೆಳೆಸಿಕೊಂಡಿದ್ದ ಅವರು, ಕೆಲಸದ ಬಿಡುವಿನಲ್ಲಿ ಕಿರುಚಿತ್ರಗಳನ್ನು ಮಾಡುತ್ತಿದ್ದವರು.

'ಘಟಿಂಗ' ಎಂಬ ಕಿರುಚಿತ್ರದ ಜನಪ್ರಿಯತೆ ಅವರನ್ನು ಮನರಂಜನಾ ಕ್ಷೇತ್ರದತ್ತ ವಾಲಲು ಪ್ರೇರೇಪಿಸಿತ್ತು. ಇದೀಗ ಸಾಹಿತಿ ಪೂರ್ಣಚಂದ್ರ ತೇಜಸ್ವಿ ರಚಿತ 'ಡೇರ್‌ಡೆವಿಲ್ ಮುಸ್ತಫಾ' ಕಥೆಯನ್ನು ಸಿನಿಮಾ ಮಾಡುವ ಮೂಲಕ ತಮ್ಮ ಕ್ರಿಯಾಶೀಲತೆಯನ್ನು ನಿರೂಪಿಸಲು ಸಜ್ಜಾಗಿದ್ದಾರೆ. ಹೊಸಬರೇ ಬಹುಪಾಲಿರುವ ಈ ಸಿನಿಮಾ, ಇದೇ ಮೇ 19ಕ್ಕೆ ಬಿಡುಗಡೆಯಾಗುತ್ತಿದೆ. ಸಿನಿಮಾ ಕುರಿತು, ಸಿನಿಮಾ ಕಟ್ಟಿದ ಅನುಭವಗಳ ಕುರಿತು ಅವರೊಂದಿಗಿನ ಮಾತುಕತೆ ಇಲ್ಲಿದೆ...

◆ **ಪೂರ್ಣಚಂದ್ರ ತೇಜಸ್ವಿ ರಚಿತ ಕಥೆಯನ್ನು ಸಿನಿಮಾ ಮಾಡಿದ್ದೀರಿ. ಈ ಕಥೆಯನ್ನು ಸಿನಿಮಾ ಮಾಡುವ ಆಲೋಚನೆ ಹುಟ್ಟಿದ್ದು ಹೇಗೆ?**

ನನಗೆ ಪೂರ್ಣಚಂದ್ರ ತೇಜಸ್ವಿ ಅವರ ಪುಸ್ತಕಗಳೆಂದರೆ ತುಂಬಾ ಇಷ್ಟ. ಸಿನಿಮಾ ಕೂಡ ನನ್ನ ಆಸಕ್ತಿಯ ವಿಷಯವಾದ್ದರಿಂದ ಈ ಕಥೆ ಓದುತ್ತಿದ್ದಾಗ, ಇದನ್ನು ಸಿನಿಮಾಗೆ ಒಗ್ಗಿಸುವ ಆಲೋಚನೆಯೂ ಬಂದಿತ್ತು. ಕೆಲವು ಕಥೆ ಓದುತ್ತಿದ್ದರೆ ಅವು ಸಿನಿಮಾ ಆಗಲೇಬೇಕು ಎಂದು ಅನಿಸಿಬಿಡುತ್ತವೆ. ಅಂಥ ಕಥೆಯಲ್ಲಿ ತೇಜಸ್ವಿ ಅವರ 'ಡೇರ್‌ಡೆವಿಲ್ ಮುಸ್ತಫಾ' ಕೂಡ ಒಂದು. ಓದುತ್ತಿದ್ದಾಗಲೇ, ಇದನ್ನು ಸಿನಿಮಾ ಮಾಡಿದರೆ ಹೇಗೆಂಬ ಉತ್ಸಾಹವೂ ಹುಟ್ಟಿಕೊಂಡಿತ್ತು.

ತೇಜಸ್ವಿ ಅವರು ಬರೆಯುವ ರೀತಿಯೇ ಕಣ್ಣ ಮುಂದೆ ದೃಶ್ಯಗಳನ್ನು ಕಟ್ಟುವಂತಿರುತ್ತದೆ. ಸಿನಿಮಾದಲ್ಲಿ ಅದನ್ನು ಇನ್ನೂ ಚೆನ್ನಾಗಿ ಕಟ್ಟಿಕೊಡಬೇಕೆನ್ನುವ ಆಸೆಯಾಯಿತು. ಮೊದಮೊದಲು ತೇಜಸ್ವಿ ಅವರಂಥ ದೊಡ್ಡ ಲೇಖಕರ ಕಥೆಯನ್ನು ಸಿನಿಮಾಗೆ, ಅದೂ ಮೊದಲ ಸಿನಿಮಾಗೆ ತೆಗೆದುಕೊಳ್ಳುವುದಕ್ಕೆ ಧೈರ್ಯ ಇರಲಿಲ್ಲ. ಆದರೂ ಆತ್ಮವಿಶ್ವಾಸವಿದ್ದಿದ್ದರಿಂದ ಮುಂದುವರೆದೆ.

ಕಥೆಯೊಂದನ್ನು ಸಿನಿಮಾ ಮಾಡುವಾಗ ನಿರ್ದೇಶಕನಾದವನು ಮರೆಯಲೇಬಾರದ ವಿಷಯವಿದೆ. ಕಥೆಯ ಲೇಖಕರ ಆಶಯ, ಭಾವ ಆಚೀಚೆ ಆಗದಂತೆ ನೋಡಿಕೊಳ್ಳುವುದು. ಆ ಆಶಯಕ್ಕೆ ಇಲ್ಲಿ ಚ್ಯುತಿ ಬಂದಿಲ್ಲವೆಂಬ ನಂಬಿಕೆ ನನ್ನದು.

◆ **ಸಾಫ್ಟ್‌ವೇರ್ ಕ್ಷೇತ್ರದಲ್ಲಿದ್ದವರು ನೀವು. ಸಿನಿಮಾಗೆ ಬಂದದ್ದು ಹೇಗೆ?**

ಶಾಲೆಯಲ್ಲಿದ್ದಾಗ ರಂಗಾಯಣದ ಬೇಸಿಗೆ ಶಿಬಿರದಲ್ಲಿ ನಾಟಕ ಮಾಡಿಸುತ್ತಿದ್ದರು. ಅಲ್ಲಿಂದ ನಾಟಕದ ಬಗ್ಗೆ ಆಸಕ್ತಿ ಹುಟ್ಟಿಕೊಂಡಿತ್ತು. ಆಮೇಲೆ ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಕೆಲಸಕ್ಕೆ ಸೇರಿಕೊಂಡೆ. ಇದು ನನ್ನ ಆಸಕ್ತಿ ಅಲ್ಲ, ನಾನು ಬಯಸಿದ್ದು ಇದನ್ನಲ್ಲ ಎಂದು ಮನಸ್ಸಿನಲ್ಲಿ ಸಣ್ಣದೊಂದು ಕೊರೆತ ಇದ್ದೇ ಇತ್ತು. ಸಿನಿಮಾ ಮಾಡಬೇಕೆಂಬ ಆಲೋಚನೆ ಮುಂಚಿನಿಂದ ಇದ್ದರೂ ದಾರಿ ಸ್ಪಷ್ಟವಿರಲಿಲ್ಲ.

ಆದರೆ ಕೆಲಸ ಮಾಡುತ್ತಲೇ ಬಿಡುವಿನ ಸಮಯದಲ್ಲಿ ಕಿರುಚಿತ್ರಗಳನ್ನು ಮಾಡುತ್ತಿದ್ದೆ. 2015ರಲ್ಲಿ 'ಘಟಿಂಗ' ಎಂಬ ಕಿರುಚಿತ್ರ ಮಾಡಿದೆ. ಯೂಟ್ಯೂಬ್‌ನಲ್ಲಿ ಇದು ಜನಪ್ರಿಯತೆ ಗಳಿಸಿತು. ಇದರ ನಂತರ ನಾನೂ ಸಿನಿಮಾ ಮಾಡಬಹುದು, ಜನರನ್ನು ರಂಜಿಸಬಹುದೆಂಬ ಧೈರ್ಯ ಬಂತು. ಅದಾಗುತ್ತಿದ್ದಂತೆ ಮನರಂಜನಾ ಕ್ಷೇತ್ರದಲ್ಲಿ ಕೆಲಸ ಮಾಡುವ ಅವಕಾಶ ಬಂತು. ಐದು ವರ್ಷಗಳ ಸಾಫ್ಟ್‌ವೇರ್ ಬಂಧ ಬಿಟ್ಟು ಇಲ್ಲಿಗೆ ಬಂದೆ.

◆ **ಮೊದಲ ಸಿನಿಮಾ ನಿರ್ದೇಶನದ ಅನುಭವ...**

ಸಿನಿಮಾ ಒಂದು ಉದ್ಯಮದಂತೆ. ಕಿರುಚಿತ್ರ ಹವ್ಯಾಸದಂತೆ. ಸಿನಿಮಾದಲ್ಲಿ ಒಂದೊಂದು ಕೆಲಸಕ್ಕೂ ಒಬ್ಬೊಬ್ಬರು ತಂತ್ರಜ್ಞರಿರುತ್ತಾರೆ. ಜವಾಬ್ದಾರಿ, ರಿಸ್ಕ್ ಇರುತ್ತದೆ. ಸಾಕಷ್ಟು ಹಣ ಒಟ್ಟುಗೂಡಿರುತ್ತದೆ. ಆದರೆ ಕಿರುಚಿತ್ರಗಳಲ್ಲಿ ಸ್ವಲ್ಪ ಸಮಯ, ಕಡಿಮೆ ಬಜೆಟ್‌ನಲ್ಲಿ ಮುಗಿಸಬಹುದು. ಸಿನಿಮಾಗೆ ಬಂದಾಗ, ಉದ್ಯಮದ ನಿರ್ವಹಣೆ ಕಲಿಯಲೇಬೇಕು.

ಮುಗ್ಧಯುದ್ಧ, ಛೇ, ಛದ್ಮವೇಷ, ಭೂತ ಮಿಸ್ಸಿಂಗ್, ಘಟಿಂಗ ಈ ಕಿರುಚಿತ್ರಗಳನ್ನು ಮಾಡಿದ್ದೆ. ಇವೆಲ್ಲವನ್ನೂ ಕಲಿಕೆಯಂತೆ ಮಾಡಿದೆ. ತಾಂತ್ರಿಕತೆ, ಬರವಣಿಗೆ ಇವೆಲ್ಲಕ್ಕೂ ಕಿರುಚಿತ್ರಗಳೇ ಅಡಿಪಾಯ. ಇದೀಗ ಮೊದಲ